ಶ್ರೀ ಆಲೂರು ಹನುಮಂತಪ್ಪ.—ಸಾಯಿಲ್ ಕನ್ಸರ್‌ವೇಷನ್ ಆಫ್ ವರ್ಕ್ ಅಲ್ಲಿ ನಡೆಯುತ್ತಿದೆ. ಗಂಧದ ಗಿಡಗಳನ್ನು ನೆಡುವ ಬಗ್ಗೆ ಮತ್ತು ಅದನ್ನು ಕಾಪಾಡುವ ಬಗ್ಗೆ ಮತ್ತು ಗಂಧದ ಬೀಜಗಳನ್ನು ಮಾಡುವ ಬಗ್ಗೆ ತಕ್ಕ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಯವರು ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಂ. ಮಲ್ಲಪ್ಪ.—(ಅ)ಗೆ ಉತ್ತರವಾಗಿ ಗಂಧದ ಮರವು ಸ್ವಾವಲಂಬಿಯಾಗಿರದೆ ಪರಾವಲಂಬಿಯಾಗಿರುತ್ತದೆ ಎಂದು ಹೇಳಿದ್ದೀರಿ. ಆದರೆ ಗಂಧದ ಮರವು ಪರಾವಲಂಬಿಯಾಗಿರುವುದನ್ನು ತಪ್ಪಿಸಿ ಸ್ವಾವಲಂಬಿಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಪರಾವಲಂಬಿಯಾಗಿ ಅದು ಬೆಳೆಯಬೇಕೇ ಹೊರತು ಸ್ವಾವಲಂಬಿಯಾಗಿ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—(ಇ)ಗೆ ಉತ್ತರವಾಗಿ ಖಾಸಗಿ ಜಮೀನುಗಳಲ್ಲಿನ ಗಂಧದ ಮರಗಳ ಒಡೆತನದ ಬಗ್ಗೆ ಹೊಸ ಮೈಸೂರು ಇತರ ಏಕೀಕೃತ ಪ್ರದೇಶಗಳಲ್ಲಿ ವಿವಿಧ ನಿಯಮಗಳು ಜಾರಿಯಲ್ಲಿವೆ ಎಂಬುದಾಗಿ ಹೇಳಿದ್ದೀರಿ. ಇನ್ನೊಂದು ಕಡೆ ನದರಿ ನಿಯಮಗಳು ಇಷ್ಟರಲ್ಲೇ ಜಾರಿಗೆ ಬರುವ ನಿರೀಕ್ಷೆ ಇದೆಯೆಂದು ಹೇಳಿದ್ದೀರಿ. ಈ ನಿಯಮಗಳನ್ನು ಜಾರಿಗೆ ತರುವುದಕ್ಕೆ ಎಷ್ಟು ದಿವಸಗಳು ಬೇಕಾಗುತ್ತವೆ ?

ಶ್ರೀ ಆಲೂರು ಹನುಮಂತಪ್ಪ.—ರೂರ್ಲ್ ಆಫೇರ್ಸಾಗಿ ಪಬ್ಲಿಷ್ ಆಗುತ್ತಾ ಇದೆ. ಈ ಪ್ರಶ್ನೆಗೆ (ಸಿ) ಮತ್ತು (ಡಿ)ಗೆ ಕೊಟ್ಟಿರುವ ಉತ್ತರದಲ್ಲಿ ಅದನ್ನು ಹೇಳಿದೆ.

Construction of Irrigation Community Well in K. R. Nagar Taluk

746. Sri M. BASAVARAJU (K. R. Nagar).—

Will the Minister for Revenue be pleased to state :—

(*a*) whether the Government has received any representation for the construction of Irrigation Community well near Madavanahalli and Beeranahalli (K. R. Nagar Taluk) ;

(*b*) if so, the action taken in the matter ?

Sri H. V. KOUJALGI (Minister for Revenue).—

(*a*) No.

(*b*) Does not arise in view of the reply to clause (*a*).

ಶ್ರೀ ಎಂ. ಬಸವರಾಜು.—(ಅ) ಪ್ರಶ್ನೆಗೆ ಉತ್ತರವಾಗಿ 'ಬಂದಿಲ್ಲ' ಎಂದು ಇದೆ. ನಾನೇ ಖುದ್ದಾಗಿ ಸರ್ಕಾರಕ್ಕೆ ಇದರ ಬಗ್ಗೆ ಒಂದು ಮನವಿಯನ್ನು ನಲ್ಲಿಸುತ್ತೇನೆ. ಅದನ್ನು ಸರ್ಕಾರದವರು ಪರಿಶೀಲನೆಮಾಡುತ್ತಾರೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಪರಿಶೀಲನೆಮಾಡುತ್ತಾರೆ.

ಶ್ರೀ ಎಂ. ಬಸವರಾಜು.—ಈ ಪ್ರದೇಶದಲ್ಲಿ ಕೆ. ಆರ್. ನಗರ ತಾಲ್ಲೂಕಿಗೆ ಅನುಕೂಲವಾಗಿರತಕ್ಕ ಹಾರಂಗಿ ಪ್ರಾಜೆಕ್ಟ್ ಮಾಡಬೇಕೆಂದು ಇದ್ದರೂ ಸೂರ್ಯಚಂದ್ರ ಇರುವವರೆಗೂ ನೀರು ಅಲ್ಲಗೆ ಬರುವುದಿಲ್ಲವೆಂದು ತೋರುತ್ತದೆ. ಅಂತಹ ಬರಗಾಲ ಪ್ರದೇಶ ಅದು. ಆದ್ದರಿಂದ ಈ ಪ್ರಾಜೆಕ್ಟನ್ನು ಅದಷ್ಟು ಶೀಘ್ರವಾಗಿ ಮಂಜೂರುಮಾಡುವ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಪರಿಶೀಲನೆಮಾಡಿ ಅದು ಸಾಧ್ಯವಾದರೆ ತೆಗೆದುಕೊಳ್ಳುತ್ತೇವೆ.